::ಬೆಂಗಳೂರು ನಗರ ಜಿಲ್ಲಾ ಪಂಚಾಯತ್::

ಉಪನಿರ್ದೇಶಕರ ಕಛೇರಿ,ಸಾರ್ವಜನಿಕಶಿಕ್ಷಣ ಇಲಾಖೆ, ನಗರದಕ್ಷಿಣ ಜಿಲ್ಲೆ, ಕಲಾಸಿಪಾಳ್ಯ, ಬೆಂಗಳೂರು-02

ಸಂಖ್ಯೆ:ಅನು4/ಹೊಪ್ರಶಾ/ಶಾನೊ/ಅನು/64/2009-10

ದಿನಾಂಕ: 22/04/2010

<u>ನಮೂನೆ-2</u>

(ನಿಯಮ 3 ರ ಉಪ-ನಿಯಮ 5 (ಬಿ) )

ಪ್ರಮಾಣ ಪತ್ರದ ಸಂಖ್ಯೆ: 13/2010-11

ಎಂ.ಟಿ.ಬಿ ಅನಂತ ಉನ್ನತಿ ಎಜುಕೇಷನಲ್ ಟ್ರಸ್ಟ್(ರಿ),ನಂ.69, ಮಂಜುನಾಥ ನಿಲಯ, ಗರುಡಾಚಾರ್‌ಪಾಳ್ಯ, ಮಹದೇವಪುರ ಅಂಚೆ, ಕೆ.ಆರ್.ಪುರಂ, ಬೆಂಗಳೂರು. ಗವರ್ನಿಂಗ್ ಕೌನ್ಸಿಲ್‌ನ್ನು ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆಕ್ಟ್ ಸಂಖ್ಯೆ: 01 ರ 1995) ಸೆಕ್ಷನ್ 31 ರಂತೆ ಈ ದಿನ ಅಂದರೆ ದಿನಾಂಕ: 22/04/2010 (ಇಪ್ಪತ್ತೆರಡು-ಏಪ್ರಿಲ್-ಎರಡುಸಾವಿರದಹತ್ತು) ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ನಡೆಸಲು ನೊಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಿದೆ.

| | | |
|---|---|---|
| 01 | ಕ್ರಮ ಸಂಖ್ಯೆ | 13/2010-11 |
| 02 | ಶಿಕ್ಷಣ ಸಂಸ್ಥೆಯ ಹೆಸರು/ವಿಳಾಸ | ಎಂ.ಟಿ.ಬಿ ಅನಂತ ಉನ್ನತಿ ಎಜುಕೇಷನಲ್ ಟ್ರಸ್ಟ್(ರಿ),ನಂ.69, ಮಂಜುನಾಥ ನಿಲಯ, ಗರುಡಾಚಾರ್‌ಪಾಳ್ಯ, ಮಹದೇವಪುರ ಅಂಚೆ, ಕೆ.ಆರ್.ಪುರಂ, ಬೆಂಗಳೂರು. |
| 03 | ಶಾಲೆಯ ಹೆಸರು/ವಿಳಾಸ | .ಎಂ.ಟಿ.ಬಿ ವಿದ್ಯಾವರ್ಧಿನಿ ಇಂಟರ್‌ನ್ಯಾಷನಲ್ ಕಿರಿಯ ಪ್ರಾಥಮಿಕ ಶಾಲೆ, ಗರುಡಾಚಾರ್ ಪಾಳ್ಯ, ಮಹದೇವಪುರ ಅಂಚೆ, ಕೆ.ಆರ್.ಪುರ, ಬೆಂಗಳೂರು. |
| 04 | ಅನುಮತಿ ನೀಡಿದ ತರಗತಿ | 1 ರಿಂದ 5ನೇ ತರಗತಿವರೆಗೆ. |
| 05 | ಪ್ರಾರಂಭಿಸಬೇಕಾದ ತರಗತಿಗಳು ಹಾಗೂ ಶೈಕ್ಷಣಿಕ ವರ್ಷ | 1 ರಿಂದ 5ನೇ ತರಗತಿವರೆಗೆ 2010-11 ನೇ ಸಾಲಿನಿಂದ. |
| 06 | ಅನುಮತಿ ನೀಡಿದ ಮಾಧ್ಯಮ | ಕನ್ನಡ ಮಾಧ್ಯಮ ಶಾಶ್ವತ ಅನುದಾನವಿಲ್ಲದೆ. |
| 07 | ಶುಲ್ಕ ಪಾವತಿಸಿದ ವಿವರ | ಡಿ.ಡಿ.ಸಂ: 000680, ದಿ:13/10/2009 ಬ್ಯಾಂಕ್:ಸ್ಟೇಟ್ ಬ್ಯಾಂಕ್ ಆಫ್ ಮೈಸೂರು. |

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ: 13 ಪುಟ ಸಂಖ್ಯೆ:12 ವಾಲ್ಯೂಂ:01 ರಲ್ಲಿ ಈ ಕಛೇರಿಯಲ್ಲಿ ಶೈಕ್ಷಣಿಕ ಸಂಸ್ಥೆಗಳ ನೊಂದಣಿ ವಹಿಯಲ್ಲಿ ನೊಂದಾಯಿಸಲಾಗಿದೆ.

ಈ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ.

1. ಈ ನೊಂದಾವಣೆಯು ನಿಯಮ 3(5)(4) ಕ್ಕೆ ಒಳಪಟ್ಟಿರುತ್ತದೆ.
2. ಗವರ್ನಿಂಗ್ ಕೌನ್ಸಿಲ್ ಇವರು ನಿಯಮ 4(4) ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
3. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ ಪಾಠ-ಪೀಠೋಪಕರಣಗಳು ಸಿಬ್ಬಂದಿ ವರ್ಗ ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
4. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಶಾಲೆಯನ್ನು ತೆರೆಯುವುದು ಹಾಗು ತರಗತಿಗಳನ್ನು ನೆಲಮಹಡಿಯಲ್ಲಿಯೇ ನಡೆಸುವುದು ಖಡ್ಡಾಯವಾಗಿದೆ. ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
5. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಆಡಳಿತ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿಯೇ ನಡೆಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಸರ್ಕಾರ/ಇಲಾಖೆಯ ಪೂರ್ವಾನುಮತಿ ಇಲ್ಲದೆ ಹಸ್ತಾಂತರಿಸತಕ್ಕದ್ದಲ್ಲ.
6. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದ್ದಾಗ್ಗೆ ಹೊರಡಿಸುವ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು.
7. ಇಲಾಖೆ ಹಾಗೂ ಸರ್ಕಾರ ನಿಗಧಿಪಡಿಸಿದ ಪಠ್ಯ ಮತ್ತು ಪುಸ್ತಕ ಪರೀಕ್ಷಾ ಕ್ರಮ ಇತ್ಯಾದಿ ತಪ್ಪದೇ ಅಳವಡಿಸತಕ್ಕದ್ದು.
8. ಶಾಲೆಯನ್ನು ನೊಂದಣಿ ಮಾಡಿದ ಮೂರು ವರ್ಷದೊಳಗೆ ಸಂಬಂಧಿಸಿದ ಅಧಿಕಾರಿಗಳಿಂದ ಮಾನ್ಯತೆ ನವೀಕರಿಸಿಕೊಳ್ಳುವುದು.
9. ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಪಾಲಿಸತಕ್ಕದ್ದು. ಹಾಗು ನೇಮಕಾತಿ ಮಾಡಿಕೊಂಡ ಶಿಕ್ಷಕರು/ಸಿಬ್ಬಂದಿಗಳಿಗೆ ಸೇವಾವಹಿ/ಬ್ಯಾಂಕ್ ಖಾತೆ ತೆರೆದು ಕನಿಷ್ಠ ವೇತನ ನಿಗಧಿಪಡಿಸಿ ಪಾವತಿಸುವ ಮೂಲಕ ಸೇವಾಭದ್ರತೆಯನ್ನು ಕಲ್ಪಿಸುವುದು.
10. ಶಾಲೆಗೆ ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸತಕ್ಕದ್ದು.
11. ಪ್ರತಿ ವರ್ಷವೂ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.
12. ಕರ್ನಾಟಕ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು, ಆಟದ ಮೈದಾನ, ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಒದಗಿಸತಕ್ಕದ್ದು, ಇಲ್ಲದಿದ್ದಲ್ಲಿ ನೊಂದಣಿಯನ್ನು ರದ್ದುಗೊಳಿಸಲಾಗುವುದು.
13. ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮದಂತೆ ಪಾಲಿಸತಕ್ಕದ್ದು.

14. ಶಾಲೆಯನ್ನು 1 ರಿಂದ 5 ನೇ ತರಗತಿಯವರೆಗೆ ಇತ್ತೀಚಿನ ಭಾಷಾ ನೀತಿಯಂತೆ ಕನ್ನಡ ಮಾಧ್ಯಮದಲ್ಲಿ/ಮಾತೃ ಭಾಷೆಯಲ್ಲಿ ನಡೆಸುವುದಾಗಿ ನೋಟರಿಯವರಿಂದ ದೃಢೀಕರಿಸಿ ಪ್ರಮಾಣ ಪತ್ರವನ್ನು ನೀಡುವುದು.
15. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೊಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ಎರಡು ತಿಂಗಳ ಒಳಗಾಗಿ ಈ ಕಛೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತಂತಾನೇ ರದ್ದಾಗುವುದು.
16. ಶಾಲೆಯು ಯಾವುದೇ ಸಂದರ್ಭದಲ್ಲಿ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
17. ಕರ್ನಾಟಕ ಶಿಕ್ಷಣ ಮಸೂದೆ ಅನುಚ್ಛೇದ 8 ರ ಅಡಿಯಲ್ಲಿ ಉಪಬಂಧ 36-37 ರಂತೆ ನೊಂದಾಯಿಸಿದ ಎಲ್ಲಾ ಶಾಲೆಗಳು ರೆಕಗ್ನಿಷನ್ ಹಾಗೂ ಪ್ರಾವಿಷನಲ್ ರೆಕಗ್ನಿಷನ್ ವ್ಯಾಪ್ತಿಗೆ ಬರುವುದು.
18. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರ ನೇಮಕಾತಿ, ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮ 1999 ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
19. ಶಾಲೆಯ ಸ್ಥಿರನಿಧಿಯನ್ನು ನಿಯಮಾನುಸಾರ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಯವರ ಜಂಟಿ ಖಾತೆಯಲ್ಲಿಡಬೇಕು.
20. ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಹಾಗೂ ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯದ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಡ್ಡಾಯವಾಗಿ ಒದಗಿಸಬೇಕು.
21. ಶಾಲೆಯ ಕಟ್ಟಡ ಹಾಗೂ ಆವರಣವನ್ನು ಬೆಂಕಿ, ಅಪಘಾತ, ವಿದ್ಯುತ್ ಅಪಘಾತ ಮತ್ತಿತರ ಅಪಘಡಗಳಿಂದ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ಮತ್ತು ಸಿಬ್ಬಂದಿಗೆ ಸುರಕ್ಷಿತವಾಗಿರುವಂತೆ ಹಾಗು ಕಟ್ಟಡ ಸುರಕ್ಷತೆಯ ಬಗ್ಗೆ ಸುಪ್ರಿಂಕೋರ್ಟ ಪ್ರಕರಣ ಸಂ: 483/04 ದಿ:13/04/2009 ರಲ್ಲಿ ನೀಡಿರುವ ನಿರ್ದೇಶನಗಳನ್ನು ಕಡ್ಡಾಯವಾಗಿ ಪಾಲಿಸುವುದು.
22. ಪ್ರತಿ ವರ್ಷ ಶಾಲೆಯ ದಾಖಲಾತಿಯನ್ನು ಏಪ್ರಿಲ್ 10 ರ ನಂತರ ಪ್ರಾರಂಭಿಸಬೇಕು ಈ ದಾಖಲಾತಿಯು ನಿಗಧಿಪಡಿಸಿರುವ ಮೀಸಲಾತಿಯಂತೆ ಶಾಲಾ ಮಕ್ಕಳನ್ನು ದಾಖಲು ಮಾಡಿಕೊಳ್ಳಬೇಕು.
23. ಶಾಲೆಯಲ್ಲಿ "ಅಗ್ನಿ ನಂದಕ"ಗಳನ್ನು ಅಳವಡಿಸುವುದು ಕಡ್ಡಾಯವಾಗಿದೆ.
24. ನ್ಯಾಷನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾ 2005 ರಲ್ಲಿನ ನಿರ್ದೇಶನಗಳನ್ನು ಅಳವಡಿಸಿಕೊಳ್ಳುವುದು ಕಡ್ಡಾಯವಾಗಿದೆ.

(ಎಸ್.ಕೆ.ಚೆನ್ನಬಸಪ್ಪ)
ಉಪನಿರ್ದೇಶಕರು (ಆಡಳಿತ)
ಬೆಂಗಳೂರು ದಕ್ಷಿಣ ಜಿಲ್ಲೆ

22/4

ದಿನಾಂಕ: 22/04/2010
ಸ್ಥಳ: ಬೆಂಗಳೂರು

ಪ್ರತಿ:
1. .ಕ್ಷೇತ್ರ ಶಿಕ್ಷಣಾಧಿಕಾರಿಗಳು, ದಕ್ಷಿಣ ವಲಯ-4, ಕೆ.ಆರ್.ಪುರಂ, ಬೆಂಗಳೂರು.
2. ಕಾರ್ಯದರ್ಶಿಗಳು, ಎಂ.ಟಿ.ಬಿ ಅನಂತ ಉನ್ನತಿ ಎಜುಕೇಷನಲ್ ಟ್ರಸ್ಟ್(ರಿ),ನಂ.69, ಮಂಜುನಾಥ ನಿಲಯ, ಗರುಡಾಚಾರ್‌ಪಾಳ್ಯ, ಮಹದೇವಪುರ ಅಂಚೆ, ಕೆ.ಆರ್.ಪುರಂ, ಬೆಂಗಳೂರು
3. ಮುಖ್ಯಶಿಕ್ಷಕರು, .ಎಂ.ಟಿ.ಬಿ ವಿದ್ಯಾವರ್ಧಿನಿ ಇಂಟರ್‌ನ್ಯಾಷನಲ್ ಕಿರಿಯ ಪ್ರಾಥಮಿಕ ಶಾಲೆ, ಗರುಡಾಚಾರ್ ಪಾಳ್ಯ, ಮಹದೇವಪುರ ಅಂಚೆ, ಕೆ.ಆರ್.ಪುರ, ಬೆಂಗಳೂರು.
4. ಕಛೇರಿ ಪ್ರತಿ.